ಕೋರ್ಟಿನಲ್ಲಿ ವಾದ ಪ್ರತಿವಾದಗಳು ಜರುಗಿ, ಅವರ ಅಪರಾಧ ಸಾಬೀತಾಗಿ ಸಜೆಯ ಘೋಷಣೆ ಆಗಿದ್ದು ಇದೇ ವರ್ಷದ ಜುಲೈ ತಿಂಗಳಿನಲ್ಲಿ. ವಿಚಾರಣೆಯ ಉದ್ದಕ್ಕೂ ಅಪರಾಧವನ್ನು ಅಲ್ಲಗಳೆಯುತ್ತಿದ್ದ, ಒಬ್ಬರು ಇನ್ನೊಬ್ಬರನ್ನು ದೂಷಿಸುತ್ತಿದ್ದ, 39 ಹಾಗು 32 ವರ್ಷದ ಅಪರಾಧಿ ಜೋಡಿ, ಮರ ಬೀಳುವ ಸಂದರ್ಭವನ್ನು ತಮ್ಮ ಮೊಬೈಲ್ ಫೋನಿನಲ್ಲಿ ಚಿತ್ರೀಕರಿಸಿಕೊಂಡಿದ್ದರು. ಬಿದ್ದ ಮರದ ಗೆಲ್ಲೊಂದನ್ನು ಪದಕದಂತೆ ತಮ್ಮೊಡನೆ ಒಯ್ದಿದ್ದರು.

1991ರಲ್ಲಿ ನಿರ್ಮಾಣಗೊಂಡ ರಾಬಿನ್‌ಹುಡ್ ಸಿನಿಮಾದ ಒಂದು ಮುಖ್ಯ ಸನ್ನಿವೇಶ ಈ ಮರದ ಹಿನ್ನೆಲೆಯಲ್ಲಿ ಚಿತ್ರಿತವಾಗಿದ್ದರೆ, 2023ರ ಸೆಪ್ಟೆಂಬರ್ 27ರ ಜೋರು ಗಾಳಿಯ ನಡುಇರುಳಿನಲ್ಲಿ ಬ್ಯಾಟರಿ ಚಾಲಿತ ಗರಗಸದ ಕಿರಕಲು ಧ್ವನಿಯ ಕೊನೆಗೆ ತುಂಡಾಗಿ ಬೀಳುವುದು ಇಬ್ಬರು ಕಿಡಿಗೇಡಿಗಳ ನಿರ್ದೇಶನ ನಟನೆಯಲ್ಲಿ ಘಟಿಸಿದ ಅದೇ ಮರದ ಅಂತಿಮ ಕ್ಷಣದ ದೃಶ್ಯಚಿತ್ರ ಆಗಿತ್ತು. ನಿಮಿಷಗಳಲ್ಲಿ ಆರಂಭವಾಗಿ ಮುಗಿಯುವ ಮರ ಕಡಿಯುವ ಸಂದರ್ಭವನ್ನು ನೋಡಿದವರಲ್ಲಿ ವಿಭಿನ್ನ ಭಾವನೆಗಳು ಹುಟ್ಟಬಹುದಾದರೂ, ಇನ್ನೇನು ಬೀಳಲಿರುವ ಮರಕ್ಕೆ ಒಂದು ಕ್ಷಣಕ್ಕೆ ತನ್ನನ್ನು ಬದುಕಿಸಲು ಆ ರಾಬಿನ್‌ಹುಡ್ ಆದರೂ ಬರಬಾರದಿತ್ತೇ ಎಂದೂ ಅನಿಸಿರಬಹುದು. ತನ್ನನ್ನು ನೆಟ್ಟು ಬೆಳೆಸಿದ ಜಾನ್ ಕ್ಲೇಟನ್ ನೆನಪೂ ಆಗಿರಬಹುದು. ತನ್ನ ನೆರಳಲ್ಲಿ ತಂಗಿ ಮುಂದುವರಿದ ಕಾಲ್ನಡಿಗೆಯವರು, ತನ್ನ ಆಸುಪಾಸಿನ ಕ್ಷಣಭಂಗುರದಲ್ಲಿ ಲೀನರಾಗಿ ಮೈಮರೆತ ಲಕ್ಷ ಲಕ್ಷ ಅನಾಮಿಕ ಅಜ್ಞಾತ ಪ್ರವಾಸಿಗರು ಸ್ಮರಣೆಗೆ ಬಂದಿರಬಹುದು. ಮುಸ್ಸಂಜೆಯ ಖಾಸಗಿ ಗಳಿಗೆಯೊಂದರಲ್ಲಿ ತನ್ನ ಬಲಿಷ್ಠ ಕಾಂಡದ ಮರೆಯಲ್ಲಿ ಅಡಗಿ ತೋಳ್ಬಂಧಿಗಳಾಗಿ ನಿಂತು, ತುಟಿಗೆ ತುಟಿ ಒತ್ತಿ ಮೈಮರೆತ ಪ್ರಣಯಭಿಕ್ಷುಗಳು ಮನಸಿಗೆ ಬಂದಿರಬಹುದು. ಬಿಡಿ, ಫೋನು ತಪಾಸಣೆಯಲ್ಲಿ ದೊರೆತ ಆ ವಿಡಿಯೋ ತುಣುಕು ಎಬ್ಬಿಸುವ ಭಾವಲಹರಿ ಏನೇ ಇದ್ದರೂ, ಕಾನೂನು ತನಿಖೆಯ ಮಟ್ಟಿಗೆ ಅತಿ ಅಗತ್ಯವಾದ ಪುರಾವೆಯನ್ನು ಒದಗಿಸಿತ್ತು. ಇಡೀ ಘಟನೆಯನ್ನು ಆರೋಪಿಯ ಪರ ವಕೀಲರು, 'ಕುಡಿದ ಅಮಲಿನಲ್ಲಿ ಮಾಡಿರಬಹುದಾದ ಮೂರ್ಖತನ' ಎಂದು ವಾದಿಸಿದ್ದನ್ನು ತಿರಸ್ಕರಿಸಲು ಸಹಾಯ ಮಾಡಿತ್ತು. ಮತ್ತೆ ನ್ಯೂ ಕಾಸಲ್ ಕ್ರೌನ್ ಕೋರ್ಟ್, ಆ ಇಬ್ಬರನ್ನೂ ಅಪರಾಧಿ ಎಂದು ನಿರ್ಣಯಿಸಲು ಪ್ರಮುಖ ಆಧಾರವಾಗಿ ಒದಗಿತ್ತು.

ಪ್ರಸಿದ್ಧ ಮರದ ಅಕಾಲಿಕ ಸಾವಿನ ಸುದ್ದಿಗೆ ಇಂಗ್ಲೆಂಡಿನ ಒಳಗಿನಿಂದ ಹಾಗೂ ಹೊರಗಿನಿಂದ ತೀವ್ರ ಪ್ರತಿಕ್ರಿಯೆ ದೊರೆತಿತ್ತು. ಸಿಟ್ಟು, ಆಘಾತ, ಆಶ್ಚರ್ಯಗಳು ಸಾಮಾಜಿಕ ಜಾಲತಾಣವನ್ನು ತುಂಬಿದವು. ಸುದ್ದಿ ಪತ್ರಿಕೆಯ ಮುಖಪುಟಗಳಲ್ಲಿ, ವೆಬ್ ಪೇಜ್‌ಗಳಲ್ಲಿ ವಸಂತ ವೈಶಾಖದ ಹಸಿರಿನಲ್ಲಿ ಹಾಗೂ ಶರತ್ ಶಿಶಿರಗಳ ಹಿಮಹೊದಿಕೆಯಲ್ಲಿ ವಿಭಿನ್ನ ರೂಪದ ಮರದ ಚಿತ್ರಗಳು ಕಾಣಿಸಿಕೊಂಡವು. ಕೆಲವರು ಭಾವುಕರಾಗಿ ಕವಿತೆಗಳನ್ನು ಕಟ್ಟಿ ಹಾಡಿದ್ದರು. ಕವಿತೆಯ ಸಾಲುಗಳನ್ನು ಕೇಳಿದ ಕೆಲವರು ಕಣ್ಣೀರು ಹಾಕಿದರು. ಪ್ರಕೃತಿ ಸೃಜಿತ ಗಾಳಿಯ ನಿನಾದ, ಮನುಷ್ಯ ನಿರ್ಮಿತ ಗರಗಸದ ಕರ್ಕಶ ಸದ್ದುಗಳು ಜೊತೆಯಾದ ಹಿನ್ನೆಲೆ ಸಂಗೀತದಲ್ಲಿ ಶವವಾಗುವ ಮರದ ಚಿತ್ರತುಣುಕು, ಸಾಮಾಜಿಕ ಮಾಧ್ಯಮದಲ್ಲಿ ಅನಾಥ ಅಸಹಾಯಕ ಸಾಕ್ಷಿಗಳಂತೆ ಓಡಾಡಿದವು.

2023ರ ಅಕ್ಟೋಬರ್‌ನಲ್ಲಿ, ಕಡಿದುಬಿದ್ದ ಮರವನ್ನು ಖಂಡ ತುಂಡು ಮಾಡಿ ಕ್ರೇನ್ ಮೂಲಕ ಸಾಗಿಸಲಾಯಿತು. ಅಕಾಲಿಕ ಸಾವಿನ ಪುರಾತನ ಮರದ ಕಥೆಯ ಮುಂದುವರಿದ ಪುಟವಾಗಿ, ಇಲ್ಲಿನ ಹಲವು ನೈಸರ್ಗಿಕ ತಾಣಗಳ ಉಸ್ತುವಾರಿ ವಹಿಸಿಕೊಂಡಿರುವ 'ನ್ಯಾಷನಲ್ ಟ್ರಸ್ಟ್ ಸಂಸ್ಥೆ' ಆ ಮರದಿಂದ ನಲವತ್ತೊಂಬತ್ತು ಸಸಿಗಳನ್ನು ಬೆಳೆಸಿ, ದೇಶದ ಬೇರೆ ಬೇರೆ ಸಂಸ್ಥೆಗಳಿಗೆ ನೀಡಿತು. ತನ್ನ ಕೊನೆಯ ಕಾಲದಲ್ಲಿ ನಲವತ್ತೊಂಬತ್ತು ಅಡಿ ಉದ್ದ ಇದ್ದ ಮರದ ನೆನಪಿಗಾಗಿ ಬೆಳೆಸಿದ 49 ಸಸಿಗಳನ್ನು ಚಾರಿಟಿ ಸಂಸ್ಥೆಗಳಿಂದ ಪಡೆಯಲು ಜನರಿಂದ ಅರ್ಜಿಗಳನ್ನು ಆಹ್ವಾನಿಸಲಾಯಿತು. ಆ ಗಿಡಗಳನ್ನು ಪಡೆಯಲು ಯುನೈಟೆಡ್ ಕಿಂಗ್‌ಡಮ್‌ನ ಬೇರೆಬೇರೆ ಭಾಗಗಳಿಂದ 500 ಅರ್ಜಿಗಳು ಬಂದಿದ್ದವು. ಪ್ರತಿ ಅರ್ಜಿದಾರನೂ ತಮಗ್ಯಾಕೆ ಒಂದು ಸಸಿ ಬೇಕು ಎಂದು ಬರೆದಿದ್ದರು. ಸಸಿ ಹಂಚುವ ಅಭಿಯಾನವನ್ನು 'ನಾಳಿನ ಭರವಸೆಗಾಗಿ ಮರಗಳು' ಎಂದು ಕರೆಯಲಾಗಿತ್ತು. ನಲವತ್ತೊಂಬತ್ತರಲ್ಲಿ ಒಂದು ಸಸಿ, ಹ್ಯಾಡ್ರಿಯನ್ ಗೋಡೆಯಿಂದ ಬಹಳವೇನೂ ದೂರದಲ್ಲಿರದ